# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-05

Cw-04

| | |
|---|---|
| ಸಾಕ್ಷಿದಾರರ ಹೆಸರುಃ | ಶಿವಪ್ಪ ಬಸಪ್ಪ ದೇಸಳ್ಳಿ |
| ತಂದೆಃಗಂಡನ ಹೆಸರುಃ | ಮುಪ್ಪಣ್ಣ |
| ವಯಸ್ಸುಃ | 41 ವರ್ಷ |
| ಉದ್ಯೋಗಃ | ವ್ಯವಸಾಯ |
| ವಾಸ ಸ್ಥಳಃ | ಯತ್ತಿನಹಳ್ಳಿ |

**ದಿನಾಂಕ:29.08.2024 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಈಗ್ಗೆ 2½ ವರ್ಷಗಳ ಹಿಂದೆ ಪೊಲೀಸರು ಘಟನೆ ನಡೆದ ಸ್ಥಳಕ್ಕೆ ಬಂದು ಸ್ಥಳ ಮಹಜರು ಮಾಡಿ, ಸ್ಕೆಚ್ ತಯಾರಿಸಿ, ಪೋಟೋ ತೆಗೆದರು. ಅಲ್ಲಿದ್ದ ಮು.ಮಾ-1 ರಿಂದ 7 ನ್ನು ಅಮಾನತ್ತುಪಡಿಸಿಕೊಂಡರು. ಸದರಿ ಮಹಜರು ನಿಪಿ-3 ಅಂತಾ ಗುರುತಿಸಿದ್ದು, ಸಾಕ್ಷಿ ಸಹಿ ನಿಪಿ-3(ಬಿ) ಅಂತಾ ಗುರುತಿಸಲಾಯಿತು. ಸ್ಕೆಚ್ ನಿಪಿ-4 ಅಂತಾ ಈಗಾಗಲೇ ಗುರುತಿಸಿದ್ದು, ಸಾಕ್ಷಿ ಸಹಿ ನಿಪಿ-4(ಬಿ) ಅಂತಾ ಗುರುತಿಸಲಾಯಿತು. ಪೋಟೋಗಳನ್ನು ಈಗಾಗಲೇ ನಿಪಿ-5 ರಿಂದ 10 ಗುರುತಿಸಲಾಗಿದೆ.

ಅದೇ ದಿನ ಪೊಲೀಸರು ನಿಪಿ-11 ರಂತೆ ಮೃತ ಗಣೇಶನ ಶವ ಪಂಚನಾಮೆ ಮಾಡಿರುತ್ತಾರೆ. ಸ್ಥಳದಲ್ಲಿ ನಾನು ಹಾಜರಿದ್ದು ನಿಪಿ-11 ಕ್ಕೆ ಸಹಿ ಮಾಡಿದ್ದೇನೆ. ಸಾಕ್ಷಿ ಸಹಿ ನಿಪಿ-11(ಬಿ) ಅಂತಾ ಗುರುತಿಸಲಾಯಿತು. ಪೋಟೋ ನಿಪಿ-12 ರಿಂದ 14 ಅಂತಾ ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

ನಾನು ಗ್ರಾಮ ಪಂಚಾಯತಿ ಸದಸ್ಯನಿದ್ದೆ. ಈಗ ಇಲ್ಲ. ನಿಪಿ-3, 4 ಮತ್ತು 11 ರಲ್ಲಿ ಏನು ಬರೆದಿದೆ ಅಂತಾ ಮಾಹಿತಿ ಇಲ್ಲ. ಪೊಲೀಸರು ಖಾಲಿ ಪೇಪರ್ ಗೆ ಸಹಿ ತೆಗೆದುಕೊಂಡಿದ್ದಾರೆ. ಪೋಟೋದಲ್ಲಿ ನನ್ನನ್ನು ಬಿಟ್ಟು ಯಾರು ಇದ್ದಾರೆ ಗೊತ್ತಿಲ್ಲ. ಯಾವ ಉದ್ದೇಶಕ್ಕೆ ಪೋಟೋ ತೆಗೆದುಕೊಂಡಿದ್ದಾರೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-16 , 17 ರಲ್ಲಿ ನನ್ನನ್ನು ಬಿಟ್ಟು ಯಾರು ಇದ್ದಾರೆ ಗೊತ್ತಿಲ್ಲ. ನನಗೆ ನೋಟೀಸು ಕೊಟ್ಟು ಪಂಚನಾಮೆಗೆ ಕರೆದಿಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.